KMF ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ
KARNATAKA CO-OPERATIVE MILK PRODUCER'S FEDERATION LIMITED
ನಂದಿನಿ

ಸಂಖ್ಯೆ. ಕಹಾಮ/ಮಾ/ಜಾ/ಪಪ್ರ/2022-23

ದಿನಾಂಕ: 25.05.2022

– : ಪತ್ರಿಕಾ ಪ್ರಕಟಣೆ : –

**ವಿಷಯ: ಕರ್ನಾಟಕ ಸಹಕಾರ ಕ್ಷೇತ್ರದ ಹೈನೋದ್ಯಮದಲ್ಲಿ ಕರ್ನಾಟಕ ಹಾಲು ಮಹಾ ಮಂಡಳದ ಮೈಲಿಗಲ್ಲು:**

ಕರ್ನಾಟಕ ಹಾಲು ಮಹಾ ಮಂಡಳ (ಕಹಾಮ) 2020 ನೇ ಸಾಲಿನಲ್ಲಿ **ದಿನಾಂಕ: 14/07/2020 ರಂದು 88.30 ಲಕ್ಷ ಕೆ.ಜಿ. ಯಷ್ಟು ಗರಿಷ್ಠ ಪ್ರಮಾಣದ ಹಾಲನ್ನು ಶೇಖರಣೆ ಮಾಡಿ ಮೊದಲ ಮೈಲುಗಲ್ಲು ಸ್ಥಾಪಿಸಿರುತ್ತದೆ.**

ಕಹಾಮವು ಹಾಲು ಉತ್ಪಾದಕರಿಗೆ ಹಾಗು ಪ್ರಾಥಮಿಕ ಹಾಲು ಉತ್ಪಾದಕ ಸಹಕಾರ ಸಂಘಗಳಿಗೆ ಎಲ್ಲಾ 15 ಜಿಲ್ಲಾ ಹಾಲು ಒಕ್ಕೂಟಗಳ ಮೂಲಕ ಅನೇಕ ಸೌಲಭ್ಯಗಳಾದ ರಾಸುಗಳಿಗೆ ತುರ್ತು ಚಿಕಿತ್ಸೆ, ರಾಸುಗಳಲ್ಲಿ ಸಾಂಕ್ರಾಮಿಕ ಕಾಯಿಲೆಗಳ ವಿರುದ್ಧ ಲಸಿಕಾ ಕಾರ್ಯಕ್ರಮ, ಸಮತೋಲಿತ ಪಶು ಆಹಾರ ವಿತರಣೆ, ಕೊಟ್ಟಿಗೆಯ ನೆಲಹಾಸು ಬಳಕೆಗೆ ರಬ್ಬರ್ ಮ್ಯಾಟ್‌ಗಳ ವಿತರಣೆ, ಸಮರ್ಪಕ ಮೇವಿನ ಬಳಕೆಗಾಗಿ ಮೇವು ಕಟಾವು ಯಂತ್ರಗಳ ವಿತರಣೆ, ಶುದ್ಧ ಹಾಲು ಉತ್ಪಾದನೆ ಮತ್ತು ಹೈನುರಾಸು ನಿರ್ವಹಣೆಗಾಗಿ ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಈ ಹಿಂದಿನಿಂದಲೂ ಒದಗಿಸುತ್ತಾ ಬರುತ್ತಿದೆ. ಈ ರೀತಿ ಸೌಲಭ್ಯಗಳ ಮೂಲಕ ಹಾಲುತ್ಪಾದನಾ ಹೆಚ್ಚಳಕ್ಕೆ ತನ್ನದೇ ಆದ ರೀತಿಯಲ್ಲಿ ಕಹಾಮ ಹೈನುಗಾರಿಕೆ ಸಮಾಜಕ್ಕೆ ಕೊಡುಗೆಯನ್ನು ನೀಡುತ್ತಾ ಬಂದಿದೆ.

2021ರಲ್ಲಿ ಕೋವಿಡ್ ಸಂಕಷ್ಟ ಇಡೀ ದೇಶವನ್ನೇ ಕಾಡುವ ಮೂಲಕ ಬಹುತೇಕ ಎಲ್ಲಾ ವಹಿವಾಟುಗಳು ಸ್ಥಗಿತಗೊಂಡಿದ್ದ ಅ ಸಂದರ್ಭದಲ್ಲಿಯೂ ಸಹಿತ ಕಹಾಮವು ಎಂದಿನಂತೆ ಕಾರ್ಯವೈಖರಿಯನ್ನು ಮುಂದುವರೆಸಿತ್ತು ಜೊತೆಗೆ **ದಿನಾಂಕ 11/06/2021 ರಂದು 90.62 ಲಕ್ಷಕೆ.ಜಿ.ಯಷ್ಟು ಗರಿಷ್ಠ ಪ್ರಮಾಣದ ಹಾಲನ್ನು ಶೇಖರಿಸಿ, 2 ನೇ ಮೈಲಿಗಲ್ಲನ್ನು ಸ್ಥಾಪಿಸಲಾಗಿರುತ್ತದೆ.**

ಹಾಲು ಉತ್ಪಾದನಾ ಹೆಚ್ಚಳಕ್ಕಾಗಿ ಕಹಾಮ ಹಾಲು ಉತ್ಪಾದಕರಿಗೆ ಒದಗಿಸುತ್ತಾ ಬಂದಿರುವ ಸೌಲಭ್ಯಗಳ ಪೈಕಿ ಅತಿ ಮುಖ್ಯವಾದ ಸೌಲಭ್ಯವೆಂದರೆ, ರಿಯಾಯಿತಿ ದರದಲ್ಲಿ ಸಮತೋಲಿತ ಪಶು ಆಹಾರದ ಪೂರೈಕೆ. ಗರಿಷ್ಠ ಪ್ರಮಾಣದಲ್ಲಿ ಸಮತೋಲಿತ ಪಶು ಆಹಾರವನ್ನು ಪೂರೈಕೆ ಮಾಡಲು ಕಹಾಮ ಕೈಗೊಂಡ ಕ್ರಮದಿಂದಾಗಿ **ಇದೀಗ ದಿನಾಂಕ :24/05/2022 ರಂದು 91.07 ಲಕ್ಷಕೆ.ಜಿ. ಪ್ರಮಾಣದಷ್ಟು ಹಾಲನ್ನು ಶೇಖರಿಸಿ 3ನೇ ಮೈಲಿಗಲ್ಲನ್ನು ಸ್ಥಾಪನೆ ಮಾಡಿರುತ್ತದೆ. ಕಹಾಮದ ಇತಿಹಾಸದಲ್ಲಿ ಇದುವರೆಗಿನ ಗರಿಷ್ಠ ಪ್ರಮಾಣದ ಹಾಲು ಶೇಖರಣೆ ಇದಾಗಿರುತ್ತದೆ.**

ಸರಾಸರಿ ಲೆಕ್ಕಾಚಾರದಲ್ಲಿ ದಿನವಹಿ 100 ಲಕ್ಷ ಕೆ.ಜಿ. ಪ್ರಮಾಣದಷ್ಟು ಹಾಲು ಶೇಖರಣೆ ಮಾಡುವಷ್ಟರ ಮಟ್ಟಿಗೆ ಹಾಲು ಉತ್ಪಾದನಾ ಹೆಚ್ಚಳದ ವೇಗವನ್ನು ವೃದ್ಧಿಸಿಕೊಳ್ಳಬೇಕೆಂಬುದು ಕಹಾಮದ ಗುರಿಯಾಗಿರುತ್ತದೆ.

ಗರಿಷ್ಠ ಪ್ರಮಾಣದ ಹಾಲು ಶೇಖರಣೆ ಮೂಲಕ ಇತಿಹಾಸ ನಿರ್ಮಿಸಿರುವ ಕಹಾಮ ಈ ಸಂದರ್ಭದಲ್ಲಿ ಹಾಲು ಉತ್ಪಾದಕರು, ಹಾಲು ಉತ್ಪಾದಕ ಸಹಕಾರ ಸಂಘಗಳು, ಜಿಲ್ಲಾ ಹಾಲು ಒಕ್ಕೂಟಗಳು, ಯೋಜನೆಗಳ ಮೂಲಕ ನೆರವು ನೀಡಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು, ಅಧಿಕೃತ ಹಾಲು ವಿತರಕರು, ಸಗಟು ಹಾಲು ಮಾರಾಟಗಾರರು, ಫ್ರಾಂಚೈಸಿಗಳು, ವಾಹನಗಳ ಗುತ್ತಿಗೆದಾರರು, ಸಿಬ್ಬಂದಿ ವರ್ಗ, ವಿಶೇಷವಾಗಿ ನಮ್ಮ ಗ್ರಾಹಕರು ಜೊತೆಗೆ ಸುದ್ಧಿ ಮಾಧ್ಯಮದ ಮಿತ್ರರಿಗೆ ಹಾಗೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿರುವ ಪ್ರತಿಯೊಬ್ಬರಿಗೂ ಕಹಾಮವು ಈ ಸಂದರ್ಭದಲ್ಲಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲು ಬಯಸುತ್ತದೆ.

ಅದುದರಿಂದ ಈ ಮಾಹಿತಿಯನ್ನು ಸಾರ್ವಜನಿಕ ಗಮನಕ್ಕೆ ತರುವ ಸಲುವಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ರಾಜ್ಯದ ಸಮಸ್ತ ಹಾಲು ಉತ್ಪಾದಕರ ಪರವಾಗಿ ಕೋರಿದೆ.

**ಕರ್ನಾಟಕ ಹಾಲು ಮಹಾಮಂಡಲಿಯ ಪರವಾಗಿ,**

**( ಬಿ. ಸಿ. ಸತೀಶ್ ಕೆಎಎಸ್ )**

**ವ್ಯವಸ್ಥಾಪಕ ನಿರ್ದೇಶಕರು**

**ಗೆ,**

**ಸಂಪಾದಕರು,**

**ಬೆಂಗಳೂರು**

ಕೆ.ಎಂ.ಎಫ್ ಸಂಕೀರ್ಣ, ಅಂಚೆ ಚೀಲ ಸಂಖ್ಯೆ : 2915, ಡಾ॥ ಎಂ.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029.
KMF Complex, P.B. No. 2915, Dr. M.H. Marigowda Road, Bengaluru - 560 029. Phone : 080-26096800, 25536625, Fax : 080-25536105.
e-mail : ps.md@kmf.coop / admin@kmf.coop / finance@kmf.coop / marketing@kmf.coop / purchase@kmf.coop / mis@kmf.coop
ahykmf@yahoo.com / step@kmf.coop / cti@kmf.coop